ವಿಷಯ : ರಾಜ್ಯದಲ್ಲಿ ಸಾರಾಯಿ ಮಾರಾಟ ನಿಷೇಧ

1502 (2043)-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಾರಾಯಿ ಮಾರಾಟ ನಿಷೇಧ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಅಧಿವೇಶನದಲ್ಲಿ ಸಾರಾಯಿ ಮಾರಾಟ ನಿಷೇಧ ಬಗ್ಗೆ ಸರ್ಕಾರವು ನೀಡಿದ ಆಶ್ವಾಸನೆ ಜಾರಿಗೊಳಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು)

ಅ) ರಾಜ್ಯದಲ್ಲಿ ಪಾನ ನಿಷೇಧದ ಬಗ್ಗೆ ಪರಿಶೀಲಿಸಲು ಮಾನ್ಯ ಉಪ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯೊಂದನ್ನು ಸರ್ಕಾರವು ರಚಿಸಿದೆ. ಸದರಿ ಉಪ ಸಮಿತಿಯು ಈ ಸಮಸ್ಯೆಯ ಸಮಗ್ರ ಅಧ್ಯಯನ ನಡೆಸಿದೆ. ಈ ಸಮಿತಿಯು ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಸಹ ಭೇಟಿ ನೀಡಿ ಆ ರಾಜ್ಯಗಳ ಅಬಕಾರಿ ನೀತಿಯಲ್ಲಿ ಜಾರಿಗೊಳಿಸಲಾದ ಇತ್ತೀಚಿನ ಬದಲಾವಣೆಗಳಿಂದ ಉಂಟಾಗಿರುವ ಪರಿಣಾಮಗಳನ್ನು ಮತ್ತು ವಾಸ್ತವ ಸಂಗತಿಗಳನ್ನು ಸಮಿತಿ ವಸ್ತು ನಿಷ್ಠವಾಗಿ ಗ್ರಹಿಸಿದೆ. ಸಚಿವ ಸಂಪುಟದ ಉಪ ಸಮಿತಿಯು ಈ ಅಧ್ಯಯನದ ಆಧಾರದ ಮೇಲೆ ಮಾನ್ಯ ಉಪ ಮುಖ್ಯ ಮಂತ್ರಿಯವರು 1997-98ನೇ ಸಾಲಿನ ಆಯವ್ಯಯದ ಮೇಲೆ ಮಾಡಿದ ಭಾಷಣದಲ್ಲಿ ಒಂದು ಘೋಷಣೆಯನ್ನು ಮಾಡಲಾಗಿದೆ. ಅದರಂತೆ 1997-98ನೇ ಅಬಕಾರಿ ವರ್ಷದಿಂದ ಸಾರಾಯಿ ಮಾರಾಟದ ಹಕ್ಕನ್ನು ಹರಾಜು ವ್ಯವಸ್ತೆಗೆ ಬದಲಾಗಿ ಪರವಾನಗಿಯ ಮೂಲಕ ನೀಡಲಾಗುವುದು ಹಾಗೂ ಸಾರಾಯಿ ಮಾರಾಟ ಅಂಗಡಿಗಳ ಸಂಖ್ಯೆಯನ್ನು ಗಣನೀಯವಾಗಿ ಕಡಿತ ಮಾಡಲಾಗುವುದು. ಈ ಹೊಸ ವ್ಯವಸ್ತೆಯನ್ನು ಹೇಗೆ ಜಾರಿಗೆ ತರಬೇಕೆಂಬ ವಿವರಗಳನ್ನು ಸಚಿವ ಸಂಪುಟದ ಉಪ ಸಮಿತಿ ಪರಿಶೀಲಿಸುತ್ತದೆ.

ಆ) ಮೇಲಿನಂತೆ